



# ಅಗಣಿತ ಸಿರಿಯ ಯೋಸೆಮಿಟಿ

ನಾಲ್ಕನೇ ಭಾಗ ಅಭಿವೃದ್ಧಿಗೊಂಡಿರುವ, ಉಳಿದ ಹನ್ನೆರಡಾಣೆ ಭಾಗ ದುರ್ಗಮವಾಗಿಯೇ ಉಳಿದಿರುವ ಯೋಸೆಮಿಟಿ ರಾಷ್ಟ್ರೀಯ ಉದ್ಯಾನ ಅಮೆರಿಕದ ಪ್ರಾಕೃತಿಕ ನಿಧಿಗಳಲ್ಲೊಂದು. ಈ ಉದ್ಯಾನದಲ್ಲಿನ ಸಂಚಾರ ಬೆಟ್ಟಗುಡ್ಡ, ಕಾಡುಮೇಡು, ಜಲಪಾತ, ಸರೋವರ, ವನ್ಯಮೃಗ – ಎಲ್ಲದರ ನೋಟ, ಅನುಭವವನ್ನು ಸಹೃದಯರಿಗೆ ಕರುಣಿಸುತ್ತದೆ.

■ ಡಾ. ಡಿ.ಎಸ್. ಕೃಷ್ಣರಾವ್

ಅಮೆರಿಕದ ಪ್ರವಾಸಿ ಆಕರ್ಷಣೆಗಳಲ್ಲಿ ಯೋಸೆಮಿಟಿ ರಾಷ್ಟೀಯ ಉದ್ಯಾನವನವೂ ಒಂದು. ಕ್ಯಾಲಿಫೋರ್ನಿಯಾ ರಾಜ್ಯದ ಉತ್ತರ ಭಾಗದಲ್ಲಿರುವ ಈ ರಾಷ್ಟ್ರೀಯ ಉದ್ಯಾನ, 7.5 ಲಕ್ಷ ಎಕರೆ ವಿಸ್ತೀರ್ಣ ಹೊಂದಿದೆ. ನಮ್ಮ 'ನಾಗರಹೊಳೆ'ಗಿಂತಲೂ ಐದು ಪಟ್ಟು ದೊಡ್ಡದಾದ ಈ ವಿಶಾಲ ವನವು ಪ್ರವಾಸಿಗರಿಗೆ, ಚಾರಣಿಗರಿಗೆ ಅಚ್ಚುಮೆಚ್ಚು.

ಯೊಸೆಮಿಟಿ ಪ್ರದೇಶ ರಾಷ್ಟೀಯ ಉದ್ಯಾನವೆಂದು ಘೋಷಿತವಾದುದು 1890ರಲ್ಲಿ. ಉದ್ಯಾನವನ್ನು ಸಾಕಷ್ಟು ಮಟ್ಟಿಗೆ ನೈಸರ್ಗಿಕವಾಗಿಯೇ ಉಳಿಸಿಕೊಂಡಿರುವುದು ವಿಶೇಷ. ಉದ್ಯಾನದ ಶೇ. 25 ಭಾಗವನ್ನಷ್ಟೇ ಅಭಿವೃದ್ಧಿಪಡಿಸಲಾಗಿದೆ. ಉಳಿದ ಭಾಗವನ್ನು ಹಾಗೆಯೇ ಸಂರಕ್ಷಿಸಲಾಗಿದೆ. ಆ ದುರ್ಗಮ ಕಾಡು ಅಭಿವೃದ್ಧಿ ಚಟುವಟಿಕೆಗಳ ಹಸ್ತಕ್ಷೇಪದಿಂದ ಮುಕ್ತವಾಗಿದೆ.

ವಸಂತದ ಅಂತ್ಯ, ಗ್ರೀಷ್ಮದ ಮೊದಲಭಾಗ ಯೋಸೆಮಿಟಿಗೆ ಭೇಟಿ ಕೊಡಲು ಪ್ರಶಸ್ತ ಸಮಯ. ಆ ಸಮಯದಲ್ಲಿ ಕಾನನದ ಕುಸುಮಗಳಿಂದ ಯೋಸೆಮಿಟಿಯು ಕಂಗೊಳಿಸುತ್ತಿರುತ್ತದೆ.

ನಾವು ಉದ್ಯಾನಕ್ಕೆ ಭೇಟಿ ಕೊಟ್ಟ ದಿನ, ಮೋಡವಿಲ್ಲದ ಶುಭ್ರ ಆಕಾಶವಿತ್ತು. ಎಳೆಬಿಸಿಲಿನಲ್ಲಿ ಅತಿ ದೂರದ ಬೆಟ್ಟ ಸಾಲುಗಳೂ ಸ್ಪಷ್ಟವಾಗಿ ಗೋಚರಿಸುತಿದ್ದವು. ಆಕಾಶವನ್ನು ಚುಂಬಿಸುವ ಕಡಿದಾದ ಬೆಟ್ಟಗಳು, ಮೈಮನ ನಡುಗಿಸುವ ಆಳವಾದ ಕಣಿವೆಗಳು, ಮುಗಿಲೆತ್ತರಕ್ಕೆ ತಲೆಯೆತ್ತಿ ನಿಂತಿರುವ ಬೃಹದಾಕಾರದ ಕೋನಿಫರ್ ಸಿಕ್ವಯ ಮರಗಳು – ಇವೆಲ್ಲವೂ ಅಹಂನಿಂದ ಬೀಗುವ ನಾವು ಪ್ರಕೃತಿಯ ಮುಂದೆ ಏನೇನೂ ಅಲ್ಲ, ಕೇವಲ ತೃಣಸಮಾನ ಎಂದು ಎಚ್ಚರಿಸುವಂತೆ ಕಾಣಿಸಿದವು. ಕೃಷ್ಣ ಕರಡಿ, ಮ್ಯೂಲ್ ಜಿಂಕೆ, ಗಿರಿಸಿಂಹ, ನರಿ, ದೊಡ್ಡಕೊಂಬಿನ ಕುರಿ, ಅಪಾರ ಪಕ್ಷಿವೈವಿಧ್ಯವನ್ನು ಅಲ್ಲಿ ಕಾಣಬಹುದು.

ಯೋಸೆಮಿಟಿ ನೋಡಲಿಕ್ಕೆ ಹಲವಾರು ಸೌಲಭ್ಯಗಳಿವೆ. ನಮ್ಮ ಸ್ವಂತ ಕಾರಿನಲ್ಲಿ ಉದ್ಯಾನವನದಲ್ಲಿ ಸುತ್ತಾಡಬಹುದು. ಬೇಸಿಗೆಯಲ್ಲಿ ಪ್ರವಾಸಿಗರ ದಟ್ಟಣೆ ಹೆಚ್ಚು ಇರುವಾಗ, ಸ್ವಂತ ಕಾರಿನಲ್ಲಿ ಸುತ್ತಾಡುವುದು ಉತ್ತಮವಲ್ಲ. ವಿಪರೀತ ಕಾರುಗಳ ಕಾರುಬಾರಿನಿಂದ ಕಾರುಗಳು ಆಮೆಗತಿಯಲ್ಲಿ ಸಾಗುತ್ತವೆ. ಜೊತೆಗೆ ಕಾರಿನ ಪಾರ್ಕಿಂಗ್‌ಗೂ ಪರದಾಡಬೇಕು. ವಾಹನದ ಬದಲು ಗಟ್ಟಿಮುಟ್ಟಾಗಿರುವವರು, ಸೈಕಲ್‌ನಲ್ಲಿ ಆರಾಮವಾಗಿ ವಿಹರಿಸಬಹುದು. ಕುಟುಂಬದ ಜೊತೆ ಬಂದವರು ಯೋಸೆಮಿಟಿ ಬಸ್ ಶಟಲ್ ಉಪಯೋಗಿಸುವುದು ಉತ್ತಮ. ಎಲ್ಲ ಪ್ರೇಕ್ಷಣೀಯ ಸ್ಥಳಗಳಿಗೂ ಶಟಲ್ ಸಂಪರ್ಕವಿದೆ. ಶಟಲ್‌ಗೆ ಪ್ರತ್ಯೇಕ ಪಥ ಮೀಸಲಿರುವುದರಿಂದ ಶೀಘ್ರ ಪ್ರಯಾಣ ಸಾಧ್ಯ ಮತ್ತು ಎ.ಸಿ. ವಾತಾವರಣದ ಬಸ್ ಪ್ರಯಾಣ ಹಿತಕರ. ಅಶ್ವಾರೂಢರಾಗಿ ಉದ್ಯಾನ ಸುತ್ತುವುದಕ್ಕೆ ಇಷ್ಟಪಡುವುದಾದರೆ, ಅದಕ್ಕೂ ಅವಕಾಶವಿದೆ. ಟೆಂಟ್ ಹಾಕಿಕೊಂಡು ಕ್ಯಾಂಪ್ ಮಾಡಲೂ ಸೌಕರ್ಯವಿದೆ.

'ಹಾಫ್ ಡೋಮ್ ಕಣಿವೆ'ಯ ನೋಟ ರುದ್ರ ರಮಣೀಯವಾದುದು. ಆ ಆಕರ್ಷಕ ತಾಣ ಪ್ರವಾಸಿಗರಿಂದ ಸದಾ ಗಿಜಿಗುಡುತ್ತಿರುತ್ತದೆ. ಎಲ್ ಕ್ಯಾಪಿಟನ್ ಹಾಗೂ ಹಾಫ್ ಡೋಮ್ ಬೆಟ್ಟಗಳ ಶಿಖರವೇರಲು ಹಲವಾರು ವರ್ಷದ ಅನುಭವ ಇರುವ ಹಾಗೂ ಉತ್ತಮ ದೇಹದಾರ್ಢ್ಯ ಹೊಂದಿರುವ ಚಾರಣಿಗರಿಗೆ ಮಾತ್ರ ಸಾಧ್ಯ.

ಅನೇಕ ಕಿಲೋಮೀಟರ್ ಉದ್ದದ ಟ್ರೈಲ್‌ಗಳು ಯೋಸೆಮಿಟಿಯಲ್ಲಿ ಸಾಕಷ್ಟಿವೆ. ಕೆಲವು ಅತಿ ಸುಲಭ, ಕೆಲವು ಮಧ್ಯಮ ಮತ್ತು ಹಲವು ಅತಿ ಕಠಿಣ ಶ್ರೇಣಿಯವು. ನಮ್ಮ ವಯಸ್ಸು ಮತ್ತು ಶಕ್ತಿಗನುಗುಣವಾಗಿ ಟ್ರೈಲ್ ಆಯ್ಕೆ ಮಾಡಬಹುದು. ಗೊಂದಲವಿಲ್ಲದ ಸುಲಭವಾಗಿ ಓದಬಲ್ಲ ಟ್ರೈಲ್ ನಕ್ಷೆಗಳು ಅಲ್ಲಲ್ಲಿ ಪ್ರದರ್ಶನಕ್ಕಿವೆ. ಗುಂಪಿನಲ್ಲಿ ಟ್ರೈಲ್ ಮಾಡುವವರಿಗೆ ಮಾರ್ಗದರ್ಶಕರ ಸೇವೆ ಉಚಿತವಾಗಿ ಲಭ್ಯ.

'ಮೇರಿಪೋಸ ಸಿಕ್ವಯ' ತೋಪಿನಲ್ಲಿ

